
# ಯುವಜನತೆಗೆ ಸ್ವಾಮಿ ವಿವೇಕಾನಂದರ ಅತ್ಯುತ್ತಮ ಗ್ರಂಥಗಳು


''ನನ್ನ ಭರವಸೆಯೆಲ್ಲ ಈಗಿನ ಯುವಕರ ಮೇಲೆ ನಿಂತಿದೆ'' ಎಂದಿದ್ದರು ಸ್ವಾಮಿ ವಿವೇಕಾನಂದರು. ಅವರ ಆಶಯದಂತೆ, ಭವಿಷ್ಯ ಭಾರತದ ಸುಭದ್ರ ನಿರ್ಮಾಣಕಾರ್ಯದಲ್ಲಿ ನಿರತರಾಗಬಲ್ಲ ಯುವಕರಿಗೆ ಉನ್ನತ ವಿಚಾರಗಳಿಂದಲೂ, ಶ್ರೇಷ್ಠ ಆದರ್ಶಗಳಿಂದಲೂ, ಸ್ಫೂರ್ತಿದಾಯಕ ಚಿಂತನೆಗಳಿಂದಲೂ ತುಂಬಿರುವ ಐದು ಉತ್ತಮ ಪುಸ್ತಕಗಳನ್ನಿಲ್ಲಿ ಸೂಚಿಸುತ್ತಿದ್ದೇವೆ. ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಪ್ರಕಟಿಸಿರುವ ಈ ಪುಸ್ತಕಗಳು ಯುವಕರ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಬಲ್ಲವು. ಈ ಪುಸ್ತಕಗಳು ಎಲ್ಲ ರಾಮಕೃಷ್ಣ ಆಶ್ರಮಗಳ ಪುಸ್ತಕ ಮಳಿಗೆಗಳಲ್ಲೂ, ಇತರ ಪುಸ್ತಕ ಭಂಡಾರಗಳಲ್ಲೂ ಲಭ್ಯ.

### ೧) 'ಎಚ್ಚೆತ್ತ ಭಾರತ'





ಆರು ಭಾಗಗಳಲ್ಲಿ ಸ್ವಾಮಿ ವಿವೇಕಾನಂದರ ಸ್ಫೂರ್ತಿದಾಯಕ ವಾಣಿಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ: ಯುವಕರಿಗೆ, ಸುಧಾರಕರಿಗೆ, ಶೈಕ್ಷಣಿಕ ತಜ್ಞರಿಗೆ, ಸ್ತ್ರೀಯರ ಉನ್ನತಿಗಾಗಿ, ಜನಸಾಮಾನ್ಯರ ಉನ್ನತಿಗಾಗಿ ಹಾಗೂ ದೇಶದ ವೈಭವದ ಮರು ಸ್ಥಾಪನೆಗಾಗಿ ಸ್ವಾಮಿ ವಿವೇಕಾನಂದರ ಕರೆ — ಎಂಬ ವಿಷಯಗಳನ್ನು ಈ ಭಾಗಗಳಲ್ಲಿ ಕಾಣಬಹುದು. ಮೂಲ ಗ್ರಂಥವಾದ 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯ ಸಂಪುಟಗಳ ಉಲ್ಲೇಖಗಳನ್ನೂ ಇಲ್ಲಿ ನೀಡಲಾಗಿದೆ. *ಪುಟ: ೧೬೮, ಬೆಲೆ: ೫೦/-*

### ೨) 'ಯುವಕರಿಗೆ ಕರೆ'





ಸ್ವಾಮೀಜಿ ತಮ್ಮ ಪ್ರವಚನ, ಲೇಖನ ಹಾಗೂ ಪತ್ರಗಳ ಮೂಲಕ ಭಾರತದ ಯುವಕರಿಗೆ ನೀಡಿದ ಕರೆ ಅಂದಿಗೆ ಮಾತ್ರವಲ್ಲ, ಇಂದಿಗೂ ಪ್ರಸ್ತುತ. ಅಂಥ ಪ್ರೇರಣದಾಯಕ ನುಡಿಗಳ ಸಂಕಲನವಿದು. ೧೯ ಭಾಗಗಳಲ್ಲಿ ವಿವಿಧ ವಿಷಯಗಳಿಗೆ ಅನುಗುಣವಾಗಿ ಈ ಉಪದೇಶಗಳನ್ನು ಉಲ್ಲೇಖ ಸಮೇತ ನೀಡಲಾಗಿದೆ. *ಪುಟ: ೧೦೪, ಬೆಲೆ: ೧೫/-*

### ೩.' ಕೊಲಂಬೊ ಇಂದ ಆಲ್ಮೋರಕೆ'





ಪಾಶ್ಚಾತ್ಯ ದೇಶಗಳಲ್ಲಿ ಜಯಭೇರಿ ಬಾರಿಸಿ ತಾಯ್ನಾಡಿಗೆ ಮರಳಿದ ಸ್ವಾಮೀಜಿ ಭಾರತ ದುದ್ದಕ್ಕೂ ಸಂಚರಿಸಿ, ತಮಗೆ ನೀಡಿದ ಅಭೂತಪೂರ್ವ ಸ್ವಾಗತಕ್ಕೆ ಪ್ರತಿಕ್ರಿಯೆ ನೀಡುತ್ತ ಮಾಡಿದ ಅತ್ಯಂತ ಉತ್ಸಾಹಭರಿತ ಪ್ರವಚನಗಳ ಸಂಕಲನವಿದು. ಭಾರತದ ಹಿರಿಮೆ, ಇಲ್ಲಿನ ಸಂಸ್ಕೃತಿ, ಇತಿಹಾಸ, ಧರ್ಮ, ಆಧ್ಯಾತ್ಮಿಕತೆ, ಸಮಾಜ, ಭವಿಷ್ಯ ಭಾರತದ ನಿರ್ಮಾಣ ಮುಂತಾದ ವಿಷಯಗಳನ್ನು ಕುರಿತಂತೆ ಸ್ವಾಮೀಜಿಯವರ ಶ್ರೇಷ್ಠ ಹಾಗೂ ಉದಾತ್ತ ಚಿಂತನೆಗಳು ಇಲ್ಲಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಮಲಗಿದ್ದ ಭಾರತವನ್ನು ಬಡಿದೆಬ್ಬಿಸಲು ಸ್ವಾಮೀಜಿ ನೀಡಿದ ಕರೆ ಅವರ ಅಪ್ರತಿಮ ದೇಶಪ್ರೇಮವನ್ನೂ, ಮಾನವ ಪ್ರೇಮವನ್ನೂ ಪ್ರಕಟಪಡಿಸುತ್ತದೆ. ಪ್ರತಿಯೊಬ್ಬ ಭಾರತೀಯನೂ ಓದಲೇಬೇಕಾದ ಗ್ರಂಥವಿದು. *ಪುಟ: ೪೩೨, ಬೆಲೆ: ೮೦/-*

### ೪. ವ್ಯಕ್ತಿತ್ವ ನಿರ್ಮಾಣ




ಸ್ವಾಮೀಜಿ ತಮ್ಮ ಬೋಧನೆಗಳ ಮೂಲಕ ಭವಿಷ್ಯ ಭಾರತದ ನಿರ್ಮಾಣಕ್ಕಾಗಿ ನಮ್ಮ ದೇಶದ ಯುವಕರ ವ್ಯಕ್ತಿತ್ವವನ್ನು ಬಲಶಾಲಿಯನ್ನಾಗಿಯೂ, ಶೀಲ-ಚಾರಿತ್ರ್ಯ ಸಂಪನ್ನರನ್ನಾಗಿಯೂ, ಆತ್ಮವಿಶ್ವಾಸದಿಂದ ಕೂಡಿದವರನ್ನಾಗಿಯೂ ರೂಪಿಸಲು ಬಯಸಿದ್ದರು. ಅವರ ಕೃತಿಸಂಗ್ರಹದಲ್ಲಿ ವಿವಿಧ ಭಾಗಗಳಲ್ಲಿ ಹರಡಿರುವ ಉಪದೇಶಗಳನ್ನು ಓದುಗರಿಗೆ ಅನುಕೂಲವಾಗುವಂತೆ ಕ್ರಮಬದ್ಧವಾಗಿ ಇಲ್ಲಿ ಜೋಡಿಸಿ ನೀಡಲಾಗಿದೆ. ವಿದ್ಯಾರ್ಥಿಗಳು, ಯುವಕರು ಈ ಪುಸ್ತಕದಿಂದ ವಿಶೇಷ ಪ್ರಯೋಜನ ಹೊಂದಿದ್ದಾರೆ. *ಪುಟ: ೯೬, ಬೆಲೆ: ೧೫*

### ೫. 'ಎಚ್ಚೆತ್ತ ಚೇತನ'




'ಸ್ವಾಮಿ ವಿವೇಕಾನಂದರ ಜೀವನದ ರೋಮಾಂಚಕ ಘಟನೆಗಳು ಮತ್ತು ಉದ್ಧಾರಕ ನುಡಿಗಳು' ಇಲ್ಲಿ ಸಂಕಲಿತವಾಗಿವೆ. ಈ ಕೃತಿಯ ಲಕ್ಷಾಂತರ ಪ್ರತಿಗಳು ನಾಡಿನ ಯುವಕ, ಯುವತಿಯರ ಕೈ ಸೇರಿವೆ. ಅತ್ಯಂತ ಆಕರ್ಷಕವಾದ ಈ ಪುಸ್ತಕ ಸ್ವಾಮೀಜಿ ಕುರಿತ ನಮ್ಮ ಭಕ್ತಿ-ಗೌರವಗಳನ್ನು ಇಮ್ಮಡಿ ಗೊಳಿಸುವಂತಿದೆ. *ಪುಟ: ೮೦, ಬೆಲೆ: ೧೫/-*